21/05/2020

**ಗೆ,**

**ಘನ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ.**

**ಬೆಂಗಳೂರು**

**ಸನ್ಮಾನ್ಯ ಯಡಿಯೂರಪ್ಪನವರೇ,**

ನಿಮ್ಮ ಸರಕಾರದ ತುರ್ತು ಆಹಾರ ಮತ್ತಿತರ ಉಪಕ್ರಮಗಳ ಕಾರಣಕ್ಕೆ ಕರ್ನಾಟಕದ ಗ್ರಾಮೀಣ ಭಾಗಗಳಿಂದ ಸಾಮೂಹಿಕ ಉಪವಾಸ ಅಥವಾ ಹೊಟ್ಟೆಗೆ ಏನೂ ಇರದ ಪ್ರಕರಣಗಳು ವರದಿಯಾಗಿಲ್ಲ. ಈ ಬಗ್ಗೆ ನಾವು ಕೃತಜ್ಞರಾಗಿದ್ದೇವೆ. ಕೋವಿಡ್– 19ರ ಕುರಿತ ಜಾಗೃತಿ ಮತ್ತು ಈ ಪಿಡುಗಿನ ನಿಯಂತ್ರಣಕ್ಕೆ ಕರ್ನಾಟಕ ಸರಕಾರವು ತೆಗದುಕೊಂಡ ದಕ್ಷ ಉಪಕ್ರಮಗಳ ಬಗ್ಗೆ ನಾವು ನಿಮ್ಮನ್ನು ಅಭಿನಂದಿಸುತ್ತಿದ್ದೇವೆ.

ಆದರೆ ಈ ಪಿಡುಗಿನ ತುರ್ತು ಸ್ಥಿತಿ ಅನಿರ್ದಿಷ್ಟ ಕಾಲ ಮುಂದುವರಿಯುವ ಸಂಭವ ಇದ್ದು; ಈ ಸಂದರ್ಭದಲ್ಲಿ ಗಂಭೀರ ಚರ್ಚೆಯ ಅಗತ್ಯವಿರುವ ನೀತಿ ಬದಲಾವಣೆಗಳನ್ನು ದಿಢೀರನೆ ಜಾರಿಗೆ ತರುವ ಬಗ್ಗೆ ನಮಗೆ ಆತಂಕವಿದೆ. ಆದ್ದರಿಂದ ವಿಸ್ತೃತ ಸಮಾಲೋಚನೆ ಮತ್ತು ಚರ್ಚೆಯ ಅಗತ್ಯವಿರುವ ನೀತಿಬದಲಾವಣೆಗಳನ್ನು ತರಬಾರದೆಂದು ಸರಕಾರವನ್ನು ನಾವು ವಿನಂತಿಸುತ್ತೇವೆ.

ಸಂಯುಕ್ತ ರಾಜ್ಯ ವ್ಯವಸ್ಥೆಯಲ್ಲಿ ಕರ್ನಾಟಕದ ಸ್ಥಾನಮಾನಕ್ಕೆ ಯಾವುದೇ ಧಕ್ಕೆ ಬಾರದಂತೆ ದೀರ್ಘಕಾಲೀನ ಲಾಭಗಳಾಗುವ ಹಲವಾರು ಕ್ರಮಗಳನ್ನು ಕೈಗೊಳ್ಳಲು ಅಗತ್ಯವಿರುವ ಪ್ರಾಥಮಿಕ ವಿವರಗಳಿವೆ (ಅನುಬಂಧ ನೋಡಿ). ಅದರಂತೇ, ನಾವು ಸಂಕಷ್ಟಕ್ಕೀಡಾಗಿರುವ ಮತ್ತು ಅನುಕೂಲವಂಚಿತರಾಗಿರುವ ವ್ಯಕ್ತಿ ಮತ್ತು ಸಮುದಾಯಗಳಿಗೆ ತಕ್ಷಣದ ಮತ್ತು ದೀರ್ಘಕಾಲೀನ ಕ್ರಮಗಳನ್ನು ಇಲ್ಲಿ ಮಂಡಿಸುತ್ತಿದ್ದೇವೆ.

***a.*** **ತಕ್ಷಣದ ಕ್ರಮಗಳು: ವಲಸೆ ಕಾರ್ಮಿಕರಿಗೆ ಪರಿಹಾರ, ಪುನರ್ವಸತಿ ಮತ್ತು ಅವರ ಊರಿಗೆ ಮರಳಿ ಕಳಿಸುವ ಉಪಕ್ರಮ; ಕಾನೂನಿಗನುಗುಣವಾಗಿ ಮತ್ತು ಅನುಕಂಪದಿಂದ ವರ್ತಿಸುವಂತೆ ಪೋಲೀಸ್ ಪಡೆಯನ್ನು ಸುಶಿಕ್ಷಿತಗೊಳಿಸುವುದು.; ಎಲ್ಲಾ ಕೆಲಸಗಾರರಿಗೂ ಸಂಬಳ, ವೇತನ ಮತ್ತು ಇತರ ಸಲತ್ತುಗಳನ್ನು ನೀಡುವುದು; ಬೆಳೆ ನಷ್ಟಕ್ಕೆ ಪರಿಹಾರ; ಗ್ರಾಮೀಣ ಮತ್ತು ನಗರ ವ್ಯಾಪ್ತಿಯಲ್ಲಿ ಉನ್ನತೀಕರಿಸಿದ ಉದ್ಯೋಗ ಖಾತರಿ ಕಾರ್ಯಕ್ರಮ; ಆಹಾರ ಮತ್ತು ಪೋಷಕಾಂಶಗಳ ನೀಡಿಕೆ**

***b.*** **ದೀರ್ಘ ಕಾಲೀನ ಕ್ರಮಗಳು: ಎಲ್ಲಾ ಕಾರ್ಮಿಕರಿಗೂ ಹಕ್ಕು ಮತ್ತು ಘನತೆಯನ್ನು ಖಚಿತಪಡಿಸುವ ಹೊಸ ಕಾರ್ಮಿಕ ಶಾಸನ; ಹೊಸ ಚಿಂತನೆಯ ಮತ್ತು ದಕ್ಷ ಅನುಷ್ಠಾನದ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸುವುದು; ಗ್ರಾಮೀಣ ಬುನಾದಿಯ ಸಣ್ಣ**

**ಪ್ರಮಾಣದ ಸಂಸ್ಕರಣೆ ಮತ್ತು ಉತ್ಪಾದನಾ ಘಟಕಗಳ ಸ್ಥಾಪನೆ; ಪರಿಸರ ಪುನಶ್ಚೇತನ ಮತ್ತು ಸಂರಕ್ಷಣೆ; ಪಂಚಾಯತ್ ರಾಜ್ ಸಂಸ್ಥೆಗಳನ್ನು ಗಟ್ಟಿಗೊಳಿಸುವುದು; ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸುವುದು; ಯುವಕರಿಗೆ ಮರುತರಬೇತಿ ಮತ್ತು ಕೌಶಲ್ಯ ನೀಡಿಕೆ**

ಈ ಉದ್ದಿಶ್ಯ ಮತ್ತು ಗುರಿಗಳನ್ನು ಸಾಧಿಸಲು ಈ ಕೆಳಗಿನ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕೆಂದು ನಾವು ಸರಕಾರವನ್ನು ಒತ್ತಾಯಿಸುತ್ತೇವೆ. ಈ ಕ್ರಮಗಳು ಭಾಗೀದಾರಿ ಶಕ್ತಿ ಸಂಚಯನವನ್ನು ಸಾಧಿಸಬಲ್ಲುದು.

**a.** ಕೋವಿಡ್–19 ಲಾಕ್ ಡೌನ್ ಮತ್ತು ಲಾಕ್ ಡೌನ್ ತರುವಾಯದ ಸಂದರ್ಭವನ್ನು ನಿರ್ವಹಿಸುವ ಸಮಿತಿ/ಕಾರ್ಯಪಡೆ ಯಾವುದು ಎಂಬ ವಿವರಗಳೇ ಲಭ್ಯವಿಲ್ಲ. ಈ ಸಂಕಷ್ಟದ ಸಮಯದಲ್ಲಿ ರಾಜ್ಯದ ತುರ್ತು ಕಾರ್ಯಪಡೆಗೆ ಸಲಹೆ ನೀಡಲು ನಾಗರಿಕ ಸಮಾಜದ ಗಣ್ಯರು, ವೃತ್ತಿಪರರು ಮತ್ತು ಅನುಭವೀ ತಜ್ಞರನ್ನು ನಾಮ ನಿರ್ದೇಶನ ಮಾಡಬೇಕಾಗಿ ಕೋರುತ್ತೇವೆ. ಈ ಸಮಿತಿಯ ನಿರ್ಣಯಗಳನ್ನು ಸಾರ್ವಜನಿಕವಾಗಿ ತಿಳಿಸುವ ನಿಯಮಿತ ವ್ಯವಸ್ಥೆ ಇರಬೇಕು. ಹಾಗೇ ರಾಜ್ಯ ಸರಕಾರದ ಹೊಸ ಆರ್ಥಿಕ ಉತ್ತೇಜಕ ನಿಧಿಯ ಮತ್ತು ಇತರ ಕಾರ್ಯಕ್ರಮಗಳ ಅನುಷ್ಠಾನ ಮತ್ತು ನಿಧಿ ಉಪಯೋಗದ ವಿವರಗಳನ್ನೂ ಸಾರ್ವಜನಿಕಗೊಳಿಸಬೇಕು.

**b.** **ದೂರು ಪರಿಹಾರ ವ್ಯವಸ್ಥೆ:** ಈ ಸಂದರ್ಭವು ಗಮನಾರ್ಹ ಮೊತ್ತದ ಹಣಕಾಸು, ಆಹಾರ, ವೈದ್ಯಕೀಯ ಮತ್ತಿತರ ವರ್ಗಾವಣೆಯನ್ನು ಬಯಸುತ್ತಿದ್ದು ಪರಿಣಾಮಕಾರಿ ದೂರು ಪರಿಹಾರ ವ್ಯವಸ್ಥೆಯನ್ನು ಎಲ್ಲಾ ಹಂತಗಳಲ್ಲೂ ಆರಂಭಿಸಬೇಕೆಂದು ಕೋರುತ್ತೇವೆ. ದೂರವಾಣಿ ಸಹಾಯ ವಾಣಿಯಿಂದಾಚೆ ಗ್ರಾಮಗಳಿಂದ ಹಿಡಿದು ನಗರಗಳ ವರೆಗೆ ಪರಿಣಾಮಕಾರಿ ದೂರು ಪರಿಹಾರ ವ್ಯವಸ್ಥೆ ಸ್ಥಾಪಿಸಬೇಕಾಗಿದೆ. ಇದು ವಿಕೇಂದ್ರೀಕೃತವಾಗಿರಬೇಕು ಮತ್ತು ಜನರು ಸುಲಭದಲ್ಲಿ ಸಂಪರ್ಕಿಸುವಂತೆ ಇರಬೇಕು. ಜನರು ಮತ್ತು ಆಡಳಿತವು ಸಮಸ್ಯೆಗಳಿಗೆ ಪರಿಹಾರ ಒದಗಿಸುವಂಥ ಸನ್ನದನ್ನು ಒಳಗೊಂಡಿರಬೇಕು

ಕರ್ನಾಟಕ ಅಭಿವೃದ್ಧಿಶೀಲ ಮತ್ತು ಭರವಸೆಯ ರಾಜ್ಯವೆಂಬ ಹೆಗ್ಗಳಿಕೆಯನ್ನು ಉಳಿಸಿಕೊಳ್ಳಲು ಇಂಥಾ ತುರ್ತು ಸಂದರ್ಭದಲ್ಲಿ ಸರಕಾರವು ದಿಟ್ಟವಾಗಿ ಕಾರ್ಯಶೀಲವಾಗಬೇಕಿದೆ. ಮಾನವೀಯ ಪ್ರಜಾಸತ್ತಾತ್ಮಕ ಆಡಳಿತವೊಂದೇ ಈ ಸಂಕಷ್ಟವು ಮಾನುಷ ದುರಂತವಾಗದಂತೆ ತಡೆಯಬಲ್ಲುದು.

ಇತ್ತೀಚೆಗಿನ ಕೆಲವು ಘಟನಾವಳಿಗಳ ಬಗ್ಗೆ ಶಿಕ್ಷಣ ಕ್ಷೇತ್ರದ ಪ್ರತಿನಿಧಿಗಳಾದ ನಾವು ಕಾಳಜಿ ಹೊಂದಿದ್ದು, ನಿಮ್ಮಿಂದ ಗೌರವಾರ್ಹ ಸ್ಪಂದನೆಯ ನಿರೀಕ್ಷೆ ಮಾಡುತ್ತಿದ್ದೇವೆ.

ನಿಮ್ಮ ವಿಶ್ವಾಸಿಗಳು

ಸಹಿದಾರರು

1. ಪ್ರೊ. ವಿನೋದ್ ಗೌರ್. ಜಿಯೋ ಫಿಸಿಸಿಸ್ಟ್. ಮಾಜೀಕಾರ್ಯದರ್ಶಿ ವಿಜ್ಞಾನ ಮತ್ತು ತಂತ್ರಜ್ಞಾನ, Fourth Paradigm (GOI), ಬೆಂಗಳೂರು.

2. ಪ್ರೊ. ರಾಮೇಶ್ವರಿ ವರ್ಮ. ಅರ್ಥಶಾಸ್ತ್ರಜ್ಞೆ, ಮೈಸೂರು ವಿವಿ. ಮೈಸೂರು
3. ಪ್ರೊ. ನರಸಿಂಹನ್, ಗಣಿತ ಶಾಸ್ತ್ರಜ್ಞರು, TIFR.
4. ಪ್ರೊ. ವಿದ್ಯಾನಂದ ನಂಜುಂಡಯ್ಯ, Centre for Human Genome, ಬೆಂಗಳೂರು
5. ಪ್ರೊ.ಎಸ್.ಮಹಾದೇವನ್, ನಿವೃತ್ತ ಪ್ರಾಧ್ಯಾಪಕರು. ಐ.ಐ.ಎಸ್.ಸಿ, ಬೆಂಗಳೂರು
6. ಪ್ರೊ.ಫೂಲನ್ ಪ್ರಸಾದ್, ಗಣಿತಶಾಸ್ತ್ರ ವಿಭಾಗ, ಐ.ಐ.ಎಸ್ಸಿ, ಬೆಂಗಳೂರು
7. ಡಾ. ರಾಮಚಂದ್ರ ಗುಹಾ, ಇತಿಹಾಸಕಾರ. ಬೆಂಗಳೂರು
8. ಜಿ.ವಿ.ದಾಶರಥಿ. ಕಂಪ್ಯೂಟರ್ ವಿಜ್ಞಾನಿ ಮತ್ತು ಉದ್ಯಮಿ, ಬೆಂಗಳೂರು
9. ಪ್ರೊ. ಅಮಿತ್ ಭಸೋಲೆ, ಅಜೀಂ ಪ್ರೇಮ್ಜೀ ವಿವಿ
10. ಪ್ರೊ. ದೀಪಕ್ ಮಲ್ಘಾನ್, ಐ.ಐ.ಎಂ.ಬೆಂಗಳೂರು
11. ಪ್ರೊ. ನಿತಿನ್ ರಾಯ್. ಎಟ್ರಿ, ಬೆಂಗಳೂರು
12. ಪ್ರೊ.ಶರದ್ ಲೆಲೆ, ಎಟ್ರಿ. ಬೆಂಗಳೂರು
13. ಪ್ರೊ.ಟಿ.ವಿ. ರಾಮಚಂದ್ರ. ಐ.ಐ.ಎಸ್ ಸಿ, ಬೆಂಗಳೂರು
14. ಪ್ರೊ. ಸುಪ್ರಿಯಾ ರಾಯ್ ಚೌಧರಿ, ರಾಜಕೀಯ ವಿಜ್ಞಾನಿ, ಬೆಂಗಳೂರು
15. ಪ್ರೊ.ವಿ.ಕೆ.ನಟರಾಜ್, ಅಭಿವೃದ್ಧಿ ಅಧ್ಯಯನ ತಜ್ಞರು, ಮೈಸೂರು ವಿವಿ, ಮೈಸೂರು
16. ಪ್ರೊ. ಪ್ರಜ್ವಲ್ ಶಾಸ್ತ್ರಿ, ಖಭೌತ ವಿಜ್ಞಾನಿ, ಬೆಂಗಳೂರು
17. ಬಾಲನ್ ನಂಬಿಯಾರ್, ಕಲಾವಿದ, ಬೆಂಗಳೂರು
18. ಪ್ರೊ. ಎ.ಆರ್. ವಾಸವಿ, ಸಮಾಜ ಮಾನವಶಾಸ್ತ್ರಜ್ಞೆ, ಬೆಂಗಳೂರು

**Copy to: The Chief Secretary, Shri Vijay Bhaskar, IAS.**

**ಅನುಬಂಧ: ಕರ್ನಾಟಕ ಸರಕಾರಕ್ಕೆ ವಿವಿಧ ನೀತಿ ಮತ್ತು ಕಾರ್ಯಕ್ರಮ ಕುರಿತಂತೆ ನೀಡಲಾದ ಸಲಹೆಗಳ ವಿವರಗಳು:**

1. **ವಲಸೆ ಕಾರ್ಮಿಕರ ಪರಿಹಾರ, ಪುನರ್ವಸತಿ ಮತ್ತು ಮರಳಿ ಕಳಿಸುವ ಕುರಿತು:** ಅಸಂಖ್ಯಾತ ವಲಸೆ ಕಾರ್ಮಿಕರ ಸ್ಥಿತಿ–ಗತಿ ಬಗ್ಗೆ ನಮಗೆ ತೀವ್ರ ಕಳವಳ ಉಂಟಾಗಿದೆ. ಸೇವಾ ಸಿಂಧು ಪೋರ್ಟಲ್ಲಿನಲ್ಲಿ ಸುಮಾರು ಮೂರು ಲಕ್ಷ ಕಾರ್ಮಿಕರು ನೋಂದಾವಣೆ ಮಾಡಿದ್ದರೂ ಕೆಲವೇ ಸಾವಿರ ಕಾರ್ಮಿಕರನ್ನಷ್ಟೇ ಅವರವರ ರಾಜ್ಯಗಳಿಗೆ/ ಪ್ರದೇಶಗಳಿಗೆ ಕಳಿಸಿಕೊಡಲಾಗಿದೆ. ನಾವು ತಕ್ಷಣ ಗಮನ ನೀಡಬೇಕಾದ್ದು– ಹೆದ್ದಾರಿಗಳಲ್ಲಿ, ಶಿಬಿರಗಳಲ್ಲಿ, ಖಾಲಿ ಜಾಗಗಳಲ್ಲಿ ದಿಕ್ಕಿಲ್ಲದೇ ಉಳಿದುಕೊಂಡಿರುವ ಈ ಕಾರ್ಮಿಕರ ಬಗ್ಗೆ. ಈ ಪ್ರದೇಶ ಯಾರ ಸುಪರ್ದಿಗೆ ಸೇರಿದ್ದು ಎಂಬ ಗೊಂದಲ ನಗರಪಾಲಿಕೆ, ನಗರಗಳ ಅಂಚಿನ ವಲಯಗಳ ಆಡಳಿತಗಳಲ್ಲಿದೆ. ಈ ಗೊಂದಲದ ಕಾರಣಕ್ಕೇ ನೂರಾರು ವಲಸೆ ನಾಗರಿಕರು ತಮಗೆ ದಕ್ಕಬೇಕಾಗಿರುವ ಆಹಾರ ಮತ್ತಿತರ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ವಿಚಾರದಲ್ಲಿ ಸ್ಪಷ್ಟತೆಯ ಅಗತ್ಯವಿದೆ. ಎಲ್ಲಾ ವಲಸೆ ಕಾರ್ಮಿಕರಿಗೂ ಆಹಾರ, ಸಾರಿಗೆ ಮತ್ತು ಆರೋಗ್ಯ ವ್ಯವಸ್ಥೆ ಮಾಡುವ ಬಗ್ಗೆ ಇನ್ನಷ್ಟು ಸುಸಂಘಟಿತ ವ್ಯವಸ್ಥೆ ಆಗಬೇಕಿದೆ
2. ವಲಸೆ ಕಾರ್ಮಿಕರ ಮೇಲೆ ಯಾವುದೇ ಹಿಂಸೆ ಅಥವಾ ಶಿಕ್ಷಾತ್ಮಕ ಕಾರ್ಯಾಚರಣೆ ಕೈಗೊಳ್ಳದಂತೆ ಪೋಲೀಸ್ ಇಲಾಖೆಯೆಲ್ಲಾ ಹಂತದ ಅಧಿಕಾರಿಗಳಿಗೂ ತಕ್ಷಣವೇ ಆಜ್ಞೆ ಹೊರಡಿಸಬೇಕು. ಬೇರೆ ರಾಜ್ಯಗಳಿಗೆ ಕಳಿಸುವ ಪ್ರಕ್ರಿಯೆಯ ಭಾಗವಾದ ಅರ್ಜಿ ವಿಶ್ಲೇಷಣೆ, ಆರೋಗ್ಯ ತಪಾಸಣೆ, ಸಾರಿಗೆ ವ್ಯವಸ್ಥೆ ಕುರಿತಾದ ಎಲ್ಲಾ ಪ್ರಕ್ರಿಯೆಗಳೂ ವಿವಿಧ ಪೋಲೀಸ್ ಠಾಣೆಗಳಲ್ಲಿ ಆಗುತ್ತಿರುವ ಕಾರಣ ಸ್ಪಷ್ಟ, ಕಾರ್ಯಸಾಧ್ಯ ಮಾರ್ಗದರ್ಶಿ ಸೂಚಿಗಳನ್ನು ತಕ್ಷಣವೇ ಹೊರಡಿಸಬೇಕು. ಈಗಿರುವಂತೆ ಬೆಂಗಳೂರಿನ ಕೆಲವು ಪೋಲೀಸ್ ಠಾಣೆಗಳು ಮನಬಂದಂತೆ ಕೆಲಸ ಮಾಡುತ್ತಿದ್ದು ಕಾರ್ಮಿಕರು ತೀವ್ರ ಬವಣೆ ಅನುಭವಿಸುತ್ತಿದ್ದಾರೆ.
3. ಸಂವಿಧಾನ ದತ್ತವಾದ ರಾಜ್ಯ–ಕೇಂದ್ರ ಸಂಯುಕ್ತ ಸಂರಚನೆಯನ್ನು ನಮ್ಮ ಸರಕಾರವು ಸಮರ್ಥಿಸಿಕೊಂಡು ಇನ್ನಷ್ಟು ಸಶಕ್ತಗೊಳಿಸಬೇಕಿದೆ. ಹತ್ತು ಹಲವು ಜನೋಪಕಾರಿ ನೀತಿ ಮತ್ತು ಯೋಜನೆಗಳನ್ನು ಆರಂಭಿಸಿದ ಕೀರ್ತಿ ಕರ್ನಾಟಕಕ್ಕಿದೆ. ಕರ್ನಾಟಕದ ಸರಕಾರವು ಕೇಂದ್ರ ಜಾರಿಗೊಳಿಸುತ್ತಿರುವ ಕೆಲವು ಜನವಿರೋಧಿ ಉಪಕ್ರಮಗಳನ್ನು ಇಲ್ಲೂ ಜಾರಿಗೊಳಿಸುವ ಬದಲು ಈ ಪರಂಪರೆಯನ್ನು ಅನುಸರಿಸಿ ಫೆಡರಲ್ ಹಕ್ಕುಗಳನ್ನು ಸಮರ್ಥಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರವು ಕೈಗೊಳ್ಳಬಹುದಾದ ಕೆಲವು ಉಪಕ್ರಮಗಳು ಇಂತಿವೆ:

4. ಬೇರೆ ರಾಜ್ಯಗಳಿಗೆ ಮರಳುತ್ತಿರುವ ಬಹುತೇಕ ಕಾರ್ಮಿಕರು ಕಟ್ಟಡ ನಿರ್ಮಾಣ ಕ್ಷೇತ್ರದವರು. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ತೆರಿಗೆ ನಿಧಿಯನ್ನು ಅವರ ಕಲ್ಯಾಣಕ್ಕೆ ಬಳಸಬೇಕಿದೆ. 10.74 ಲಕ್ಷ ನೋಂದಾಯಿತ ಕಾರ್ಮಿಕರಿರುವ ಕರ್ನಾಟಕವು ಅತ್ಯಂತ ಹೆಚ್ಚು ತೆರಿಗೆ ನಿಧಿ ಸಂಗ್ರಹಿಸಿದ್ದು ಕೆಲವು ನಿಧಿ ವಿಲೇ ಈಗಾಗಲೇ ಶುರುವಾಗಿದೆ. ಇದರೊಂದಿಗೇ ರೂ. 10ಸಾವಿರದಷ್ಟು ಮೊತ್ತವನ್ನು ನೇರ ನಗದು ವರ್ಗಾವಣೆ ಮೂಲಕ ಈ ನೋಂದಾಯಿತ ಕಾರ್ಮಿಕರಿಗೆ ನೀಡಬಹುದು.ಇದರ ವೆಚ್ಚ ರೂ. 1100 ಕೋಟಿಯಷ್ಟಾಗಬಹುದು.

ಬಹುತೇಕ ಕಾರ್ಮಿಕರನ್ನು ಅವರ ಉದ್ಯೋಗದಾತರು ಪ್ರಾಯಶಃ ನೋಂದಾಯಿಸಲಾರರು. ದುರದೃಷ್ಟವಶಾತ್ ಇಂಥಾ ಕಾರ್ಮಿಕರು ಇದರ ಲಾಭ ಪಡೆಯಲಾರರು. ಆದರೆ ಉಳಿದ ಮೊತ್ತದಿಂದ ಸರಕಾರ ಈ ಕ್ರಮಗಳನ್ನು ಕೈಗೊಂಡರೆ ಈ ಕಾರ್ಮಿಕರೂ ಪರೋಕ್ಷವಾಗಿ ಅನುಕೂಲ ಪಡೆಯಬಹುದು.

1. ಅವರ ರೈಲು ಪ್ರಯಾಣದ ವೆಚ್ಚ ಭರಿಸುವುದು (ಅಂದಾಜು ತಲಾ ಸಾವಿರ ರೂಪಾಯಿ)
2. ಪ್ರಯಾಣದ ವೇಳೆಯ ಅನ್ನಾಹಾರದ ವೆಚ್ಚ (ಅಂದಾಜು ತಲಾ. ರೂ 150)
3. ಪ್ರಯಾಣದ ಆರಂಭದ ಸ್ಥಳದಲ್ಲಿ ರೂ.5000 ನೀಡುವುದು

ನಿರ್ಮಾಣ ಉದ್ಯಮ ಹೊರತಾಗಿ ಇನ್ನಾವುದೇ ಉದ್ಯಮಕ್ಕೂ ಈ ತೆರಿಗೆ ಇಲ್ಲದಿರುವ ಕಾರಣ ಪ್ರಯಾಣ ಬೆಳೆಸುತ್ತಿರುವ ಎಲ್ಲಾ ಕಾರ್ಮಿಕರಿಗೂ ಇದರ ಲಾಭ ನೀಡಲು ಈ ಯೋಜನೆಯ ನಿಧಿಯನ್ನು ಬಳಸಬಹುದು

ಕಾರ್ಮಿಕರು ಅವವರ ಮನೆಗಳಿಗೆ ತೆರಳದಂತೆ ತಡೆಯುವ ಈ ನಿರ್ಮಾಣ ಕ್ಷೇತ್ರದ ಪ್ರಯತ್ನ ತಿರುಗುಬಾಣವಾಗಬಲ್ಲುದು. ಈ ಕ್ರಮದಿಂದಾಗಿ ಕಾರ್ಮಿಕರು ತಮ್ಮ ಉದ್ಯೋಗದಾತರನ್ನು ಸಂಶಯದಿಂದ ನೋಡುವಂತೆ ಮಾಡುತ್ತದಲ್ಲದೇ, ಮತ್ತೆ ಈ ಉದ್ಯೊಗದ ಸ್ಥಳಕ್ಕೆ ಮರಳದಂತೆ ಮಾಡಬಹುದು. ದೀರ್ಘಕಾಲೀನವಾಗಿ ಇದು ಈ ಉದ್ಯಮಕ್ಕೆ ಮರಣಾಂತಿಕವಾಗಬಹುದು. ಮೇಲೆ ಹೇಳಿದ ಉಪಕ್ರಮವು ಕರ್ನಾಟಕ ರಾಜ್ಯವು ತಮ್ಮ ಬಗ್ಗೆ ಕಾಳಜಿ ವಹಿಸುತ್ತಿದೆ; ಮುಂದೆಯೂ ಇಂಥಾ ಸಂಕಷ್ಟಗಳು ಬಂದಾಗ ನಮ್ಮ ಯೋಗಕ್ಷೇಮ ನೋಡಿಕೊಳ್ಳುತ್ತಾರೆ ಎಂಬ ವಿಶ್ವಾಸವನ್ನು ಈ ಕಾರ್ಮಿಕರಲ್ಲಿ ಕುದುರಿಸಬಲ್ಲುದು. ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುವ ಇತರ ರಾಜ್ಯಗಳಿಗೆ ಈ ಕಾರ್ಮಿಕರು ಹೋಗುವ ಬದಲು ಮತ್ತೆ ಇವರು ಕರ್ನಾಟಕಕ್ಕೆ ಮರಳುವುದರಿಂದ ಎಲ್ಲಾ ಉದ್ಯಮಗಳೂ ಅನುಕೂಲ ಪಡೆಯಬಲ್ಲವು.

ಎ. ಎಲ್ಲಾ ಉದ್ಯೋಗದಾತರೂ ಬಾಕಿ ಉಳಿಸಿಕೊಂಡಿರುವ ವೇತನ, ಸಂಬಳ ಮತ್ತಿತರ ಸವಲತ್ತುಗಳನ್ನು ತಕ್ಷಣವೇ ಪಾವತಿ ಮಾಡುವಂತೆ ಹೊರಡಿಸಲಾದ ಸುತ್ತೋಲೆಯನ್ನು

ಮತ್ತೆ ಜಾರಿಗೊಳಿಸಬೇಕು. ಹಾಗೇ  ನಿರ್ದಿಷ್ಟ ಮೊತ್ತಕ್ಕಿಂತ ಕಡಿಮೆಯ ಬಾಡಿಗೆ, ಸಾಲಗಳಿಂದ ಪರಿಹಾರ ನೀಡುವಂಥಾ ಆಜ್ಞೆಯನ್ನು ಮತ್ತೆ ಜಾರಿಗೊಳಿಸಿ, ಕಾರ್ಮಿಕರು ಈ ಲಾಕ್ ಡೌನ್ ಸಂದರ್ಭದಲ್ಲಿ ಅನುಭವಿಸಿದ ಉದ್ಯೋಗ ನಷ್ಟದಿಂದ ಚೇತರಿಸಿಕೊಳ್ಳಲು ಅವಕಾಶ ಮಾಡಿ ಕೊಡಬೇಕು. ಸಿದ್ಧ ಉಡುಪುಗಳ ತಯಾರಿಯಲ್ಲಿ ಬೆಂಗಳೂರು ಜಾಗತಿಕವಾಗಿಯೇ ಅತ್ಯಂತ ದೊಡ್ಡ ವಲಯಗಳಲ್ಲೊಂದು. ಇಲ್ಲಿ 4.5 ಲಕ್ಷ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ರಫ್ತು ಬೇಡಿಕೆಗಳು  ಕಡಿಮೆಯಾದರೆ ಈ ಬಲುದೊಡ್ಡ ಕಾರ್ಮಿಕ ವರ್ಗದ ಜೀವ– ಜೀವನೋಪಾಯಗಳಿಗೆ ತೀವ್ರ ಹಿನ್ನೆಡೆಯಾಗುತ್ತದೆ.  ಆದ್ದರಿಂದ ಗಾರ್ಮೆಂಟ್ ಉದ್ಯಮಕ್ಕೆ ವಿಶೇಷ ಯೋಜನೆಯನ್ನು ರೂಪಿಸಿ ಈ ವರ್ಗಕ್ಕೆ ಕನಿಷ್ಠ ಆದಾಯದ ಬೆಂಬಲವನ್ನು ಸೃಷ್ಟಿಸಬೇಕಾಗಿದೆ.  (ಇವರಲ್ಲಿ ಬಹುತೇಕ ಮಹಿಳೆಯರು)

ಬಿ. **ಕೃಷಿ ನೀತಿ ಮತ್ತು ಕಾರ್ಯಕ್ರಮಗಳು:** ಕೃಷಿಯು ರಾಜ್ಯಕ್ಕೆ ಸಂಬಂಧಿಸಿದ ವಿಷಯವಾದ್ದರಿಂದ ರಾಜ್ಯವು ತನ್ನ ಕೃಷಿ ವಲಯಗಳ ನಿರ್ದಿಷ್ಟತೆಗಳನ್ನು ಗುರುತಿಸುವಂಥಾ ನೀತಿಗಳನ್ನು ರೂಪಿಸಬೇಕಿದೆ. ತನ್ಮೂಲಕ ಅಂಚಿಗೆ ಸರಿದಿರುವ ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತ ಸಮುದಾಯದ ಅಗತ್ಯಗಳಿಗೆ ಸ್ಪಂದಿಸಬೇಕಿದೆ. ಕೃಷಿ ಮಾರುಕಟ್ಟೆ ಸಮಿತಿಗಳಂಥಾ ಸಂಸ್ಥೆಗಳನ್ನು ಉಳಿಸಿಕೊಂಡು ಅವುಗಳ ಉತ್ತಮ ಕಾರ್ಯ ನಿರ್ವಹಣೆಗೆ ಬೇಕಾದ ಹೊಸ ನಿಯಮಾವಳಿಗಳನ್ನು ಸಿದ್ಧಪಡಿಸಬೇಕಿದೆ.

**ಸಿ. ಬೆಳೆ ನಾಶದ ಪರಿಹಾರ ಮತ್ತು ಕೃಷಿ ಪುನಶ್ಚೇತನ:** ಲಾಕ್ ಡೌನ್  ಕಾರಣದಿಂದ ಲಕ್ಷಾಂತರ ರೈತರ ಫಸಲು ಮಾರಾಟವಾಗದೇ ಅಪಾರ ನಷ್ಟ ಉಂಟಾಗಿದೆ. ಅಂಥಾ ರೈತರ ನಷ್ಟ ತುಂಬಿಕೊಡುವ ವ್ಯವಸ್ಥೆಯೊಂದು ಆಗಬೇಕಿದೆ. ಈ ಪರಿಹಾರವನ್ನು ಮುಂದಿನ ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ  ಬೆಂಬಲ ನೀಡುವ ಮಣ್ಣಿನ ಪುನರ್ಜೀವ, ನೀರು ಮತ್ತು ಜೀವ ವೈವಿಧ್ಯತೆಯ ಹೆಚ್ಚಳದಂಥಾ ಕಾರ್ಯಕ್ರಮದ ಮೂಲಕವೂ ಮಾಡಬಹುದು

**ಡಿ.  ರೈತ ಉತ್ಪಾದಕ ಸಂಸ್ಥೆಗಳು ಮತ್ತು ಗ್ರಾಮೀಣ ಆಧಾರಿತ  ಸಣ್ಣ ಸಂಸ್ಕರಣಾ ಯೂನಿಟ್ಟುಗಳಿಗೆ ಪ್ರೋತ್ಸಾಹ:**  ಈ ಹೆಜ್ಜೆ ಗ್ರಾಮೀಣ ಕ್ಷೇತ್ರಗಳಿಗೆ  ನಿಜ ಸ್ವಾಯತ್ತತೆ ಮತ್ತು ಆರ್ಥಿಕ ಸ್ಥಿರತೆಯನ್ನು ತರುವುದಲ್ಲದೇ, ಈಗಿರುವ– ನಗರಗಳ ಕೈಗಾರಿಕೆ ಮತ್ತು ಕೃಷಿ ಗ್ರಾಮೀಣ ಪ್ರಪಂಚದ ಮಧ್ಯೆ ಇರುವ ಕಂದಕವನ್ನು  ಎದುರಿಸಬಲ್ಲುದು. ಇದು ಸ್ವಾವಲಂಬನೆಯನ್ನು ಸಾಧಿಸುವ ದಾರಿ. ಕೃಷಿಯಲ್ಲಿ ಕಾರ್ಪೋರೇಟ್ ಹಿತಾಸಕ್ತಿಗಳ ಪ್ರವೇಶವನ್ನು ಪ್ರೋತ್ಸಾಹಿಸುವುದಕ್ಕಿಂತ ಇದು ಉತ್ತಮ ಹೆಜ್ಜೆ.

**ಇ. ಪರಿಸರ ಪುನಶ್ಚೇತನ ಮತ್ತು ಸಂರಕ್ಷಣೆ:** ಕರ್ನಾಟಕದಲ್ಲಿ ಹದಗೆಟ್ಟಿರುವ ಸೂಕ್ಷ್ಮ ಪರಿಸರ ಸಂಪನ್ಮೂಲಗಳನ್ನು ಪುನಶ್ಚೇತನಗೊಳಿಸುವ ಮತ್ತು ಹವಾಮಾನ

ಬದಲಾವಣೆಯನ್ನು ಎದುರಿಸುವ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಇದು ಸಕಾಲ. ನದಿ, ಕೆರೆ, ಕುಂಟೆ, ಗೋಮಾಳ, ಅರಣ್ಯ ಮತ್ತಿತರ ಪರಿಸರ ಸಂಪನ್ಮೂಲಗಳನ್ನು ಪುನಶ್ಚೇತನಗೊಳಿಸಿ ಅಭಿವೃದ್ಧಿಪಡಿಸಲು ಬೇಕಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಜ್ಯದ ಆರ್ಥಿಕ ಮತ್ತು ಪರಿಸರ ಸುಸ್ಥಿರತೆಯ ಬುನಾದಿಯನ್ನು ಗಮನಾರ್ಹವಾಗಿ ಮಾಡಬಹುದು.

**ಎಫ್. ಪಂಚಾಯತ್ ರಾಜ್ ಸಂಸ್ಥೆಗಳ ಸಶಕ್ತೀಕರಣ ಮತ್ತು ಸಂರಕ್ಷಣೆ:** ಕರ್ನಾಟಕವು ವಿಕೇಂದ್ರೀಕೃತ ಆಡಳಿತದ ಮುಂಚೂಣಿಯಲ್ಲಿದ್ದ ರಾಜ್ಯ. ಈ ವ್ಯವಸ್ಥೆ ಮೂಲಕ ದಕ್ಕಿದ ಪರಿಹಾರ ಕಾರ್ಯಗಳ ಯಶಸ್ಸು ಇದರ ಲಾಭಗಳನ್ನು ತೋರಿಸಿಕೊಟ್ಟಿದೆ. ಸದ್ಯ ಮುಂದೂಡಿರುವ ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿ ಸರಕಾರವು ಸ್ವೇಚ್ಛೆಯ ಸಮಿತಿಗಳನ್ನು ಸ್ಥಾಪಿಸುವ ಬದಲು ಈಗಿರುವ ಸದಸ್ಯರನ್ನೇ ಮುಂದುವರಿಸುವ ಭರವಸೆ ನೀಡಬೇಕು. ಇದರೊಂದಿಗೇ ನಿಯಮಿತ ವೃತ್ತಿಪರ ಸಹಾಯ, ಉತ್ತರದಾಯಿತ್ವವನ್ನು ಸರಿಪಡಿಸುವುದು, ನಿಯಮಿತ ಅನುದಾನ ನೀಡಿಕೆಯಂಥಾ ಕ್ರಮಗಳ ಮೂಲಕ ಸ್ಥಳೀಯ ಆಡಳಿತಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸಲು ಇದು ಸದವಕಾಶ.

**ಜಿ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತರಿ:** ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತರಿ ಕೆಲಸಗಳು ಆರಂಭವಾಗಿದ್ದು ವೇತನ ಪಾವತಿಯೂ ಆಗುತ್ತಿದೆ ಎಂಬುದು ಸಂತೋಷದ ವಿಚಾರ. ಉದ್ಯೋಗ ಖಾತರಿಗೆ ಬಿಡುಗಡೆಯಾಗಲಿರುವ ಹೊಸ ಅನುದಾನವನ್ನು ನ್ಯಾಯೋಚಿತವಾಗಿ ಮತ್ತು ಉತ್ತರದಾಯಿತ್ವ ಇರುವ ರೀತಿಯಲ್ಲಿ ಬಳಸುವಂತೆ ನಾವು ವಿನಂತಿಸುತ್ತಿದ್ದೇವೆ. ಉದ್ಯೋಗ ಖಾತರಿಯನ್ನು ಕೃಷಿ ಮತ್ತು ಪರಿಸರ ಪುನಶ್ಚೇತನ ಯೋಜನೆಗಳಿಗೆ ಜೋಡಣೆ ಮಾಡಿ ಅನುಷ್ಠಾನಗೊಳಿಸುವುದು ಮುಖ್ಯ. ಇದರೊಂದಿಗೇ ಹೊಸ ಉದ್ಯೋಗ ಖಾತರಿ ಯೋಜನೆಯನ್ನು ನಗರ ಪ್ರದೇಶಗಳಲ್ಲೂ ಆರಂಭಿಸಬಹುದು. ಮುಖ್ಯತಃ 2 ಮತ್ತು ಮೂರನೇ ಹಂತದ ನಗರ ಮತ್ತು ಪಟ್ಟಣಗಳಲ್ಲಿ ಕೆಲಸಕಳೆದುಕೊಂಡ ಕಾರ್ಮಿಕರನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಆರಂಭಿಸಬಹುದು.

**ಎಚ್. ಆಹಾರದ ಪೂರೈಕೆ:** ಪಡಿತರ, ಬಿಸಿ ಊಟ ಮತ್ತು ಅಂಗನವಾಡಿ ಮತ್ತಿತರ ಯೋಜನೆಗಳ ಮೂಲಕ ಆಹಾರ ಧಾನ್ಯಗಳ ಪೂರೈಕೆ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ದಕ್ಷವಾಗಿ ನಡೆಯುತ್ತಿದೆ. ಆದರೆ ಈ ಪಿಡುಗಿನ ಹಿನ್ನೆಲೆಯಲ್ಲಿ ಸರಕಾರವು ಅನುಕೂಲ ವಂಚಿತ ಮಂದಿಗೆ (ವಲಸಿಗರು,ದೈಹಿಕ, ಮಾನಸಿಕ ವಿಶೇಷ ಚೇತನರು, ನಿರ್ಗತಿಕರು ಇತ್ಯಾದಿ)ಈ ಸೌಲಭ್ಯಗಳು ದೊರಕುವ ಸುಲಭ ವ್ಯವಸ್ಥೆ ಮಾಡಬೇಕಿದೆ. ಆಹಾರದ ಹಕ್ಕಿನ ಭರವಸೆ ಈಡೇರಿಕೆಗೆ ಇದು ಅವಶ್ಯ. ತಾಂತ್ರಿಕ ಮತ್ತು

ಅಧಿಕಾರಶಾಹಿಯ ಉಪಕ್ರಮಗಳಿಂದಾಗಿ ಸಾಕಷ್ಟು ಮಂದಿ ಈ ಸೌಲಭ್ಯದಿಂದ ಹೊರಗುಳಿದಿದ್ದಾರೆ. ಅವನ್ನು ಈ ಯೋಜನೆಯೊಳಗೆ ತರುವುದು ಈ ಸಂದರ್ಭದಲ್ಲಿ ತೀರಾ ಅವಶ್ಯ. ಇದರ ಜೊತೆಗೆ ಪೋಷಕಾಂಶಗಳ ಭದ್ರತೆಯನ್ನೂ ಸರಕಾರ ಗುರುತಿಸಬೇಕು. ರಾಜ್ಯದಲ್ಲೇ ಬೆಳೆಯುವ ಕಾಳುಗಳು ಮತ್ತು ಸಿರಿಧಾನ್ಯಗಳನ್ನು ಪಡಿತರ ವ್ಯವಸ್ಥೆ ಮೂಲಕ ಹಂಚಬಹುದಾಗಿದೆ. ಇದರಿಂದಾಗಿ ಈ ಬೆಳೆಗಳ ಉತ್ಪಾದನೆಯೂ ಹೆಚ್ಚಲು ಸಹಾಯವಾಗುತ್ತದೆ. ಹಾಗೇ ನಾಗರಿಕರ ಪೋಷಕಾಂಶ ಭದ್ರತೆಯೂ ಹೆಚ್ಚುತ್ತದೆ.

**ಐ.ಆರೋಗ್ಯ ಮತ್ತು ಸೌಖ್ಯ:** ಕರ್ನಾಟಕ ಸರಕಾರವು ತನ್ನ ಸಾರ್ವಜನಿಕ ಆರೋಗ್ಯ ಸೇವೆಯನ್ನು ಇನ್ನಷ್ಟು ಸುಧಾರಿಸುವ ತುರ್ತು ಅಗತ್ಯವಿದೆ. ರಾಜ್ಯದಲ್ಲಿ ಈಗಾಗಲೇ ಅಸ್ತಿತ್ವದಲ್ಲಿದ್ದ ರಾಜ್ಯ ಕಾರ್ಯಕ್ರಮಗಳನ್ನು ಆಯುಶ್ಮಾನ್ ಭಾರತ ಆವರಿಸಿದೆ. ಆದರೆ ಇದರ ಅನುಷ್ಠಾನ ಮತ್ತು ಪರಿಣಾಮಗಳು ತೀರಾ ಸೀಮಿತವಾಗಿದೆ. ಶುಶ್ರೂಷೆಗಾಗಿ ನಗರಗಳಿಗೆ ಧಾವಿಸದಂತೆ ಸ್ಥಳೀಯವಾಗಿ ಗ್ರಾಮಾಂತರ ಮತ್ತು ಪಟ್ಟಣಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಕ್ರಿಯಗೊಳಿಸಿ ಆರೋಗ್ಯ ಸೌಲಭ್ಯಗಳನ್ನು ಪೂರೈಸಬೇಕಿದೆ. ಕೋವಿಡ್– 19 ಸಹಿತ ಎಲ್ಲಾ ರೀತಿಯ ಪ್ರಮುಖ ರೋಗಗಳಿಗೆ ಚಿಕಿತ್ಸೆ ಲಭಿಸುವಂತೆ ಎಲ್ಲಾ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳ ವೈದ್ಯಕೀಯ ಸೌಲಭ್ಯಗಳನ್ನು ಪುನಶ್ಚೇತನಗೊಳಿಸಬೇಕಿದೆ.

**ಜೆ.ಯುವಕರಿಗೆ ಮರು ತರಬೇತಿ ಮತ್ತು ಕೌಶಲ್ಯ ನೀಡಿಕೆ:** ಹಲವಾರು ಹಳ್ಳಿಗಳಲ್ಲಿ ಮರಳಿ ಬಂದ ವಲಸಿಗರಿದ್ದಾರೆ. ಇವರಲ್ಲಿ ಬಹುಪಾಲು ಯುವಕರು. ಇವರು ಸದ್ಯೋ ಭವಿಷ್ಯದಲ್ಲಿ ನಗರಗಳಿಗೆ ತೆರಳುವುದು ಕಷ್ಟಸಾಧ್ಯ. ಇಂಥಾ ನಾಗರಿಕರಿಗೆ ಹೊಸ ರೀತಿಯ ಗ್ರಾಮೀಣ ಜೀವನೋಪಾಯ ಮತ್ತು ಇತರ ಅವಕಾಶಗಳಿಗಾಗಿ ತರಬೇತಿ ಮತ್ತು ಕೌಶಲ್ಯ ನೀಡಿಕೆಯ ಅಗತ್ಯವಿದೆ. ರಾಜ್ಯದ ಆರು ವಿಭಾಗಗಳಲ್ಲಿ ಇಂಥಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದರಿಂದ ಕೃಷಿ, ಕೈಗಾರಿಕೆ ಮತ್ತು ಸೇವಾ ಆರ್ಥಿಕತೆಗಳಿಗೆ ಸಹಾಯ ಒದಗಿಸಬಹುದು.